# ಡೈರೆಕ್ಟರ್ ಅರ್ಜುನ್!




ಕನ್ನಡದಲ್ಲಿ 'ಸ್ಟಾರ್' ವರ್ಚಸ್ಸಿಗೆ ಹತ್ತಿರವಿರುವ ಕೆಲವೇ ಕೆಲವು ಸಂಗೀತ ನಿರ್ದೇಶಕರಲ್ಲಿ ಅರ್ಜುನ್ ಜನ್ಯ ಕೂಡ ಒಬ್ಬರು. ಹಲವು ದೊಡ್ಡ ಬ್ಯಾನರ್ ಸಿನಿಮಾಗಳಿಗೆ ಸಂಗೀತ ನಿರ್ದೇಶಕನಾಗಿ ಕೆಲಸ ಮಾಡಿರುವ ಅವರು ಇತ್ತೀಚೆಗೆ ಟೀವಿ ರಿಯಾಲಿಟಿ ಶೋಗಳಲ್ಲಿ ನಿರ್ಣಾಯಕನಾಗಿ ಕನ್ನಡದ ಜನರಿಗೆ ಇನ್ನಷ್ಟು ಪರಿಚಿತರಾಗಿದ್ದರು. ಈ ಎರಡೂ ಪಾತ್ರಗಳ ಆಚೆಗೆ ಹೊಸದೊಂದು ಅವತಾರ ತಾಳಲು ಅವರೀಗ ಸಜ್ಜಾಗಿದ್ದಾರೆ. ಅದು ನಿರ್ದೇಶಕನ ಅವತಾರ.

ಸಂಗೀತ ನಿರ್ದೇಶಕರು ಸಿನಿಮಾ ನಿರ್ದೇಶನದ ಕ್ಯಾಪ್ ತೊಡುವುದು ಚಂದನವನದಲ್ಲಿ ಹೊಸ ವಿದ್ಯಮಾನವೇನಲ್ಲ. ಈಗ ಸಾಕಷ್ಟು ಪ್ರಸಿದ್ಧಿ ಪಡೆದಿರುವ ಹರಿಕೃಷ್ಣ, ರವಿ ಬಸ್ರೂರು, ಸಾಧುಕೋಕಿಲ ಸೇರಿದಂತೆ ಹಲವು ಸಂಗೀತ ನಿರ್ದೇಶಕರು ಆ್ಯಕ್ಷನ್ ಕಟ್ ಹೇಳಿದ್ದಿದೆ. ಈಗ ಆ ಸಾಲಿನಲ್ಲಿ ತಮ್ಮ ಹೆಸರನ್ನೂ ಸೇರಿಸಲು ಹೊರಟಿದ್ದಾರೆ ಅರ್ಜುನ್ ಜನ್ಯ.

ಶಿವಣ್ಣನಿಗೇ ಆ್ಯಕ್ಷನ್ ಕಟ್ ಹೇಳುತ್ತಿರುವುದು ಇನ್ನೊಂದು ವಿಶೇಷ. ಈಗಾಗಲೇ ಕಥೆ ಹೇಳಿ ಅವರಿಂದ ಒಪ್ಪಿಗೆಯನ್ನೂ ಪಡೆದಾಗಿದೆಯಂತೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಶುರುವಾಗಿವೆ. ಆದರೆ ಶಿವಣ್ಣನ ಕೈಯಲ್ಲಿ ಈಗ ಸಾಲು ಸಾಲು ಸಿನಿಮಾಗಳಿವೆ. ಈಗಾಗಲೇ ಒಪ್ಪಿಕೊಂಡಿರುವ ಒಂದಿಷ್ಟು ಸಿನಿಮಾಗಳು ಮುಗಿದ ನಂತರವಷ್ಟೇ ಅರ್ಜುನ್ ಜನ್ಯ ಅವರ ಕೈಗೆ ಶಿವಣ್ಣ ಸಿಗುವುದು. ಹಾಗಾಗಿ ಈ ವರ್ಷದ ಅಂತ್ಯದವರೆಗೂ ಚಿತ್ರೀಕರಣ ಪ್ರಾರಂಭವಾಗುವುದು ಅನುಮಾನ.

ಸಂಗೀತ ನಿರ್ದೇಶನದಲ್ಲಿ ದೇಶ, ವಿದೇಶದ ಹಲವು ಮೂಲಗಳಿಂದ 'ಸ್ಫೂರ್ತಿ' ಪಡೆಯುವುದರಲ್ಲಿ ಅರ್ಜುನ್ ಜನ್ಯ ನಿಸ್ಸೀಮರು. ಅವರ ಸಂಯೋಜನೆಯ ಹಲವು ಹಾಡುಗಳು ಮೂಲವನ್ನೇ ನಾಚಿಸುವಂತಿರುತ್ತವೆ ಎನ್ನುವುದು ಬಲ್ಲವರು ಹೇಳುವ ಮಾತು. ಆ 'ಸ್ಫೂರ್ತಿ' ವ್ಯಾಮೋಹವನ್ನು ಸಿನಿಮಾ ನಿರ್ದೇಶನದಲ್ಲಿಯೂ ಮುಂದುವರಿಸುವರೋ ಅಥವಾ ಸ್ವಂತತನ ಮೆರೆಯುವಂಥ ಸಿನಿಮಾ ಕೊಡುವರೋ ಎಂಬುದನ್ನು ತಿಳಿಯಲು ಇನ್ನೊಂದು ವರ್ಷವಾದರೂ ಕಾಯಬೇಕು.

# ಮೋಹನ ಮುರಳಿಯ ನಾದ

ಕವಿ ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು' ಪದ್ಯವನ್ನು ಯಾರು ಕೇಳಿಲ್ಲ? ಮೈಸೂರು ಅನಂತಸ್ವಾಮಿ ಅವರ ಸಂಯೋಜನೆಯಲ್ಲಿ, ನಂತರ 'ಅಮೆರಿಕ ಅಮೆರಿಕ' ಸಿನಿಮಾದಲ್ಲಿ ರಾಜು ಅನಂತಸ್ವಾಮಿ ಅವರ ಕಂಠಸಿರಿಯಲ್ಲಿ ಈ ಹಾಡು ಈಗಲೂ ಕನ್ನಡಿಗರ ಕಿವಿಯಲ್ಲಿ ರಿಂಗಣಿಸುತ್ತಲೇ ಇದೆ. ಆದರೆ ಗಾಂಧಿನಗರಕ್ಕಿನ್ನೂ ಆ ಹಾಡಿನ ವ್ಯಾಮೋಹ ಮುಗಿದಂತಿಲ್ಲ. ಕೆಲಕಾಲದ ಹಿಂದೆ ಹೇಮಂತ್‌ರಾವ್ ತಮ್ಮ ಸಿನಿಮಾಕ್ಕೆ ಅದೇ ಹಾಡಿನ 'ಸಪ್ತ ಸಾಗರದಾಚೆ ಎಲ್ಲೋ' ಎಂಬ ಸಾಲನ್ನು ತೆಗೆದುಕೊಂಡು ಶೀರ್ಷಿಕೆಯಾಗಿಸಿಕೊಂಡಿದ್ದರು. ಈಗ ಹೊಸ ಹುಡುಗರ ತಂಡವೊಂದು ಈ ಹಾಡಿನ ಮೊದಲ ಸಾಲು, 'ಯಾವ ಮೋಹನ ಮುರಳಿ ಕರೆಯಿತು'ವನ್ನೇ ಶೀರ್ಷಿಕೆ ಆಗಿಸಿಕೊಂಡು ಸಿನಿಮಾ ಮಾಡುತ್ತಿದೆ.

ಶರಣಪ್ಪ ಗೌರಮ್ಮ ಈ ಚಿತ್ರಕ್ಕೆ ಹಣ ಹೂಡಿದ್ದಾರೆ. ಇದುವರೆಗೆ ಸಹಾಯ ನಿರ್ದೇಶಕರಾಗಿ ಹಲವು ಸಿನಿಮಾಗಳಿಗೆ ಕೆಲಸ ಮಾಡಿರುವ ವಿಶ್ವಾಸ್ ಕೃಷ್ಣ ಪೂರ್ಣ ಪ್ರಮಾಣದಲ್ಲಿ ನಿರ್ದೇಶನ ಮಾಡುತ್ತಿರುವ ಮೊದಲ ಸಿನಿಮಾ ಇದು. ಅನಿಲ್ ಸಿ.ಜೆ. ಸಂಗೀತ, ಕೀರ್ತನ್ ಪೂಜಾರಿ ಛಾಯಾಗ್ರಹಣ ಚಿತ್ರಕ್ಕಿದೆ.

ಜುಲೈನಲ್ಲಿ ಚಿತ್ರೀಕರಣ ಆರಂಭಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ಜೋಗದ ಬಳಿಯ ಕಾರ್ಗಲ್ ಮತ್ತು ಭಟ್ಕಳದಲ್ಲಿ ಬಹುತೇಕ ಚಿತ್ರೀಕರಣ ನಡೆಯಲಿದೆ. ಮಾಧವ ಎಂಬ ಹೊಸ ಪ್ರತಿಭೆ ನಾಯಕನಾಗಿ ನಟಿಸುತ್ತಿರುವ ಈ ಚಿತ್ರಕ್ಕೆ ಸಪ್ನ ಶೆಟ್ಟಿಗಾರ್ ನಾಯಕಿ. ಬೇಬಿ ಪ್ರಕೃತಿ, ವರುಣ್ ರಾಜು ಕೂಡ ತಾರಾಗಣದಲ್ಲಿ ಇದ್ದಾರೆ.





# ಖಳನಟರ ಮುಖಾಮುಖಿ

ಇಬ್ಬರು ಪ್ರಸಿದ್ಧ ಖಳನಟರು ಮುಖಾಮುಖಿ ಆಗಿದ್ದಾರೆ, ಅದೂ ಕೋರ್ಟಿನಲ್ಲಿ. ಖಳರು ಜೈಲಿನಲ್ಲಿ, ಕೋರ್ಟಿನಲ್ಲಿ ಮುಖಾಮುಖಿಯಾಗುವುದು ಸಾಮಾನ್ಯವಲ್ಲವೆ ಎಂದು ಭುಜ ಹಾರಿಸಬೇಡಿ. ಅವರಿಬ್ಬರೂ ಮುಖಾಮುಖಿಯಾಗಿದ್ದು ಲಾಯರ್ ದಿರಿಸಿನಲ್ಲಿ! ಅದೂ 'ಕಂಬಳ'ದ ಪರ–ವಿರೋಧದ ವಾದ ಮಾಡಲಿಕ್ಕಾಗಿ.

ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ವೀರ ಕಂಬಳ' ಸಿನಿಮಾದ ದೃಶ್ಯವೊಂದರಲ್ಲಿ ಪ್ರಕಾಶ್ ರೈ ಕಂಬಳದ ಪರವಾಗಿ ವಾದ ಮಾಡುವ ವಕೀಲರಾಗಿ ನಟಿಸಿದ್ದರೆ, ರವಿಶಂಕರ್ ವಿರೋಧಿಗಳ ಪರವಾಗಿ ವಾದಮಾಡುವ ವಕೀಲರಾಗಿ ಕಾಣಿಸಿಕೊಂಡಿದ್ದಾರೆ.

ಈ ದೃಶ್ಯ ಇತ್ತೀಚೆಗಷ್ಟೇ ಕಂಠೀರವ ಸ್ಟುಡಿಯೊದಲ್ಲಿ ಚಿತ್ರೀಕರಣಗೊಂಡಿದೆ. ಕೆಲ ವರ್ಷಗಳ ಹಿಂದೆ ದಕ್ಷಿಣ ಕನ್ನಡದಲ್ಲಿ ನಡೆಯುವ 'ಕಂಬಳ'ದ ನಿಷೇಧದ ಕುರಿತಾಗ ಪರ–ವಿರೋಧದ ಚರ್ಚೆಗಳು ನಡೆದಿದ್ದವು. ಈ ಎಳೆಯನ್ನು ಇಟ್ಟುಕೊಂಡೇ ರಾಜೇಂದ್ರ ಸಿಂಗ್ ಬಾಬು ಸಿನಿಮಾ ಮಾಡಿದ್ದಾರೆ. ಈ ಸ್ಕ್ರಿಪ್ಟ್ ಸಿದ್ಧಪಡಿಸಲು ಅವರು ಎರಡು ವರ್ಷ ತೆಗೆದುಕೊಂಡಿದ್ದಾರಂತೆ. ಕಳೆದ ಒಂಬತ್ತು ತಿಂಗಳಿಂದಲೂ ಈ ಒಂದು ಕೋರ್ಟ್ ಸೀನ್‌ಗಾಗಿ ಅವರು ಸಾಕಷ್ಟು ಯೋಚಿಸಿದ್ದಾರೆ. ಕೊನೆಗೂ ತಮ್ಮ ಶ್ರಮದಿಂದ ಆ ದೃಶ್ಯ ಚೆನ್ನಾಗಿ ಮೂಡಿಬಂದ ತೃಪ್ತಿ ಅವರದ್ದು.

ಈ ಸಿನಿಮಾಕ್ಕಾಗಿ ಸಾಕಷ್ಟು ಕಂಬಳಗಳನ್ನೂ ಬಾಬು ನೋಡಿದ್ದಾರೆ. ಆದಷ್ಟೂ ಸಹಜತೆಗೆ ಚ್ಯುತಿ ಬರದ ಹಾಗೆಯೇ ಚಿತ್ರವನ್ನು ಚಿತ್ರೀಕರಿಸಿದ್ದಾರೆ. ಹಾಗಾಗಿ ಜನರೂ ಮೆಚ್ಚಿಕೊಳ್ಳುತ್ತಾರೆ ಎಂಬ ವಿಶ್ವಾಸ ಅವರದ್ದು.